## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 869 |
| ಸದಸ್ಯರ ಹೆಸರು | : | ಶ್ರೀ ಮುನಿರಾಜುಗೌಡ.ಪಿ.ಎಂ |
| ಉತ್ತರಿಸುವ ದಿನಾಂಕ | : | 13.12.2023 |
| ಉತ್ತರಿಸುವ ಸಚಿವರು | : | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ತಿಗಳರಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೆ ನಂ-79ರಲ್ಲಿ 15 ಎಕರೆ 12 ಗುಂಟೆ ಮತ್ತು ಹೊಂಗಸಂದ್ರ ಗ್ರಾಮದ ಸರ್ವೆ ನಂ-33ರಲ್ಲಿ 16 ಎಕರೆ 25 ಗುಂಟೆ ಜಮೀನನ್ನು ದೇವಾಲಯದ ಹೆಸರಿಗೆ ಖಾತೆ ಮಾಡಲಾಗಿದೆಯೇ: | ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನೀಲಸಂದ್ರ ಗ್ರಾಮದ ಸರ್ವೆ ನಂ-79ರ ವಿಸ್ತೀರ್ಣ 15-12 ಎಕರೆ/ಗುಂಟೆ ಜಮೀನು ಶ್ರೀ ಧರ್ಮರಾಯ ಸ್ವಾಮಿ ದೇವಾಲಯದ ಇನಾಂ ಜಮೀನಾಗಿದ್ದು, ದೇವಾಲಯದ ಹೆಸರಿಗೆ ಖಾತೆ ಆಗಿರುತ್ತದೆ.<br><br>ಹೊಂಗಸಂದ್ರ ಗ್ರಾಮದ ಸರ್ವೆ ನಂ-33 ರಲ್ಲಿ 16 ಎಕರೆ 25 ಗುಂಟೆ ಜಮೀನಿನ ಆಧಿಬೋಗದಾರಿಕೆ ಹಕ್ಕನ್ನು ಶ್ರೀ ಕೆ.ಪಿ.ಗೋವಿಂದರೆಡ್ಡಿ ಹಾಗೂ ಇತರರಿಗೆ ಐಎನ್ ಎ/182/1997-98 ದಿನಾಂಕ: 21-04-2011ರಲ್ಲಿ ಮಂಜೂರು ಮಾಡಿದ್ದು, ಸದರಿ ಆದೇಶವನ್ನು ಪ್ರಶ್ನಿಸಿ ಸಹಾಯಕ ಆಯುಕ್ತರು ಮಾನ್ಯ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಅಫೀಲು ಸಂಖ್ಯೆ:572/2004 ದಾಖಲಿಸಿದ್ದು, ಸದರಿ ಪ್ರಕರಣವನ್ನು ನ್ಯಾಯಾಲಯವು ದಿನಾಂಕ:28-04-2014ರಂದು ವಜಾಗೊಳಿಸಿರುತ್ತದೆ. ಸದರಿ ಆದೇಶಗಳನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP NO:28866/2014 ರಂತೆ ಪ್ರಕರಣನ್ನು ದಾಖಲಿಸಲಾಗಿರುತ್ತದೆ. ಪ್ರಕರಣವು ದಿನಾಂಕ:16-02-2023ರಂದು ವಿಚಾರಣೆ ಬಂದಿದ್ದು ತದನಂತರ ಮುಂದಿನ ವಿಚಾರಣೆ ದಿನಾಂಕ ನಿಗದಿಯಾಗಿರುವುದಿಲ್ಲ. |
| ಆ) | ಸದರಿ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳನ್ನು ತೆರವುಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು | ಬೆಂಗಳೂರು ಉತ್ತರ ತಾಲ್ಲೂಕು ನೀಲಸಂದ್ರ ಗ್ರಾಮದ ಸರ್ವೆ ನಂಬರ್-79ರ 15-12 ಎಕರೆ/ಗುಂಟೆ ಜಮೀನಿನಲ್ಲಿನ ಒತ್ತುವರಿಯನ್ನು ಗುರುತಿಸಲು ಜಂಟಿ ನಕ್ಷೆ ತಯಾರಿಸಿದ್ದು, ಸದರಿ ಸರ್ವೆ ನಂಬರ್‌ನಲ್ಲಿ ಸುಮಾರು 216 ಮಂದಿ ಅನಧಿಕೃತದಾರರು ಮನೆಗಳನ್ನು ನಿರ್ಮಿಸಿರುವುದು ಕಂಡು ಬಂದಿರುತ್ತದೆ. ಇದರ ಜೊತೆ ಹೊಸದಾಗಿ 13 ಜನ ಒತ್ತುವರಿದಾರರನ್ನು ಗುರುತಿಸಿದ್ದು, ಒಟ್ಟು 229 ಜನ ಅನಧಿಕೃತದಾರರ ಪೈಕಿ 13 ಜನ ಅನಧಿಕೃತದಾರರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆಯನ್ನು ದಿನಾಂಕ:04.11.2020 ರಂದು ದಾಖಲು ಮಾಡಲಾಗಿರುತ್ತದೆ. |

| | | |
|---|---|---|
| | | ಸದರಿ ಅನಧಿಕೃತ ಮನೆಗಳನ್ನು ತೆರವು ಗೊಳಿಸುವ ಕುರಿತು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ದೇವಾಲಯದ ಪರವಾಗಿ ಖಾಸಗಿ ವಕೀಲರನ್ನು ನೇಮಕಾತಿ ಮಾಡಲಾಗಿರುತ್ತದೆ.<br><br>ಉಳಿದ 216 ಅನಧಿಕೃತದಾರರ ಪೈಕಿ ಮೊದಲಿಗೆ 6 ಜನ ಅನಧಿಕೃತದಾರರ ವಿರುದ್ಧ ಕರ್ನಾಟಕ ಭೂ-ಕಬಳಿಕೆ ನಿಷೇಧ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದು, ಉಳಿದ ಒತ್ತುವರಿದಾರರ ವಿರುದ್ಧ ಪ್ರಕರಣ ದಾಖಲಿಸಲು ಕ್ರಮವಹಿಸಲಾಗಿರುತ್ತದೆ. ಈಗಾಗಲೇ ದಾಖಲಾಗಿರುವ ಪ್ರಕರಣಗಳ ವಿಚಾರಣೆಯು ಈ ಕೆಳಕಂಡ ದಿನಾಂಕಗಳಂದು ನಿಗಧಿಯಾಗಿರುತ್ತದೆ. |

| ಕ್ರ. ಸಂ | ಪ್ರಕರಣ ಸಂಖ್ಯೆ ಮತ್ತು ವಾದಿ/ ಪ್ರತಿವಾದಿಗಳ ವಿವರ | ನಿಗಧಿಯಾದ ದಿನಾಂಕ |
|---|---|---|
| 1. | ಎಲ್.ಜಿಸಿ (ಜಿ) ನಂ.425/2021 ಶ್ರೀ ಧರ್ಮರಾಯಸ್ವಾಮಿ ದೇವಾಲಯ V/S ಶ್ರೀ ಸೋಮಶೇಖರ್ ಬಿನ್ ಶ್ಯಾಮ್ | 11.01.2024 |
| 2. | ಎಲ್.ಜಿಸಿ (ಜಿ) ನಂ.428/2021 ಶ್ರೀ ಧರ್ಮರಾಯಸ್ವಾಮಿ ದೇವಾಲಯ, V/S ಶ್ರೀ ಕೆ.ಯಲ್ಲಪ್ಪ ಬಿನ್ ಕೃಷ್ಣಪ್ಪ | 11.01.2024 |
| 3. | ಎಲ್.ಜಿಸಿ (ಜಿ) ನಂ.424/2021 ಶ್ರೀ ಧರ್ಮರಾಯಸ್ವಾಮಿ ದೇವಾಲಯ, V/S ಶ್ರೀ ಮುನಿರಾಜು | 11.01.2024 |
| 4. | ಎಲ್.ಜಿಸಿ (ಜಿ) ನಂ.426/2021 ಶ್ರೀ ಧರ್ಮರಾಯಸ್ವಾಮಿ ದೇವಾಲಯ V/S ಶ್ರೀ ರಾಜ ಬಿನ್ ಮುನಿಯಪ್ಪಗೌಡ | 11.01.2024 |

<table>
<tr>
<td></td>
<td></td>
<td>
<table>
<tr><td>5.</td><td>ಎಲ್.ಜಿಸಿ (ಜಿ)<br>ನಂ.427/2021<br>ಶ್ರೀ ಧರ್ಮರಾಯಸ್ವಾಮಿ<br>ದೇವಾಲಯ<br>V/S<br>ಶ್ರೀಮತಿ ಚಂದ್ರಮ್ಮ</td><td>11.01.2024</td></tr>
<tr><td>6.</td><td>ಎಲ್.ಜಿಸಿ (ಜಿ)<br>ನಂ.163/2022<br>ಶ್ರೀ ಧರ್ಮರಾಯಸ್ವಾಮಿ<br>ದೇವಾಲಯ ಮತ್ತು<br>ಇನ್ನೊಬ್ಬರು</td><td>11.01.2024</td></tr>
</table>
ಉಳಿದ 224 ಜನ ಅನಧಿಕೃತದಾರರ ವಿರುದ್ಧ ಕರ್ನಾಟಕ ಸಾರ್ವಜನಿಕರ ಆವರಣಗಳ (ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ 1974 ರಡಿಯಲ್ಲಿ ಪ್ರಕರಣ ದಾಖಲಿಸಲು ಅನುಮತಿ ನೀಡಿದ್ದು, 15 ಜನರ ವಿರುದ್ಧ ದಿನಾಂಕ:28/11/2023 ರಂದು ಪ್ರಕರಣವನ್ನು ದಾಖಲಿಸಲಾಗಿರುತ್ತದೆ. ಇನ್ನುಳಿದ 209 ಜನರ ವಿರುದ್ಧ ಪ್ರಕರಣವನ್ನು ದಾಖಲಿಸಲು ಕ್ರಮವಹಿಸಲಾಗುತ್ತಿದೆ.
</td>
<td></td>
</tr>
</table>

ಸಂಖ್ಯೆ: ಕಂಇ 130 ಮುಸಪ್ರ 2023

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ**
**ಸಚಿವರು**